ಯುದ್ಧ ವಿರಾಮವೇ ಇಲ್ಲ. ಲಾಟೀನ ಬೆಳಕಿನಲ್ಲಿ ಕೈಬಾಯಿ ಆಡಿಸುತ್ತ ನಿಂತ ಪ್ರತಿಮೆಗಳು.

ಯುಗಾದಿಯ ದಿವಸ ಅದು, ದೇವಸ್ಥಾನಕ್ಕೆ ತಾನು ಮತ್ತು ದೊಡ್ಡಪ್ಪ ಹೋಗಿ ಪಂಚಾಂಗ ಕೇಳಿ ಬರುವಾಗ ಒಬ್ಬ ಸಿಕ್ಕಿ ಮಾತಾಡಿಸಿದ. ಯಮುನಕ್ಕನ ಕಡೆಯವರದೇನೋ ಸುದ್ದಿ ಹೇಳಿದ. ಮನೆಗೆ ಬಂದವರೇ ದೊಡ್ಡಪ್ಪ ಅದನ್ನು ಹಂಗಿಸುವ ದನಿಯಲ್ಲಿ ಯಮುನಕ್ಕನಿಗೆ ಹೇಳುತ್ತ 'ಎಷ್ಟೆಂದರೂ ನಿಮ್ಮ ಕಡೆಯವನಲ್ಲವೇ? ವಂಶದ ಬುದ್ಧಿ' ಎಂದೂ ಸೇರಿಸಿದರು. 'ವಂಶದ ಮಾತೆತ್ತಬೇಡೀ ಅಂದೆ. ಮೊದಲು ನಿಮ್ಮ ವಂಶ ನೋಡಿಕೊಳ್ಳಿ... ದುರ್ಬುದ್ಧಿಯೆಲ್ಲ ನಿಮ್ಮ ಮನೆತನಕ್ಕೆ ಸೇರಿದ್ದು. ಆ ಸುಬ್ರಾಯನ ಹೊಲ ಮನೇ ನುಂಗಿದವರು ನಿಮ್ಮ ಅಪ್ಪನೇ ಅಲ್ಲವೇ? ಹೆಂಡತಿಯನ್ನು ಸಾಯುವಂತೆ ಬಡಿದು ಆ ಮೇಲೆ ಬಾವಿಯಲ್ಲಿ ಎತ್ತಿ ಹಾಕಿದ ಪ್ರತಾಪ ನಿಮ್ಮಜ್ಜನದೇ ಅಲ್ಲವೇ?...' ಕೆರಳಿದ ಯಮುನಕ್ಕ ಪುಂಖಾನುಪುಂಖವಾಗಿ ಅಮೃತವಾಕ್ಯಗಳನ್ನು ಉದುರಿಸತೊಡಗಿದಳು.

'ಏನೇ ರಂಡೆ ಏನೇ ನೀನನ್ನುವುದು?...'

'ಮತ್ತೆ ನನ್ನನ್ನು ಸಿಟ್ಟಿಗೆಬ್ಬಿಸಿ ಈವತ್ತು ಹಬ್ಬದ ದಿವಸ ಆಡಬಾರದ್ದು ಆಡಿಸಬೇಡಿ...'

'ಹೇಳೇ, ಆಗೇ ಹೋಗಲಿ ಈವತ್ತು. ಅದೇನು ಹೇಳ್ತೀಯೋ ನೋಡ್ತೆ...'

'ಹೇಳುವುದೇನು ಉಳಿದಿದೆ? ಎಲ್ಲವೂ ಇದ್ದ ಸಂಗತಿಯೇ. ನಮ್ಮ ವಂಶಕ್ಕೇನೂ ಆಗಿಲ್ಲ. ಪದ್ಮನಾಭಣ್ಣನಿಗೆ ಮೂರು ಮಕ್ಕಳಿದ್ದಾವೆ. ಇನ್ನೂ ಆಗಲಿ, ಆಗುತ್ತವೆ. ನಿಮ್ಮ ಹಾಗೆ ನೀರಿಲ್ಲದವರಲ್ಲ... ನಿಮ್ಮ ಅಣ್ಣನನ್ನೇ ನೋಡಿ, ನಿಮ್ಮ ವಂಶವೇ ಅಂಥದ್ದು. ಷಂಡರು... ಪಾರ್ವತಿ ನನ್ನ ಬಳಿ ಹೇಳಿ ಕೇಳಿ ಅಳುತ್ತಿದ್ದಳು. ಅವಳಿಗೆ ಧೈರ್ಯವಿದ್ದದ್ದರಿಂದಲೇ ಶೀನನ ಜತೆ ಓಡಿಹೋದಳು. ಧೈರ್ಯವಿಲ್ಲದ್ದಕ್ಕೆ ನಿಮ್ಮ ಜೊತೆ ದಿನ ದೂಡುತ್ತಿದ್ದೇನೆ...'

ದೊಡ್ಡಪ್ಪ ಮಾತಾಡಲೂ ಆಗದ ಹಾಗೆ ಬಿಳಿಚಿಕೊಂಡರು. ನಿಸ್ಸತ್ವವಾದ ಅವರ ಮೋರೆ ನೋಡಲಾಗುತ್ತಿರಲಿಲ್ಲ. 'ಹುಡುಗನ ಮುಂದೆ ಅದೇನು ಮಾತಾಡ್ತೀಯೋ...' ಎಂದು ಬಾಯಿ ಮುಚ್ಚಿಸಲು ಪ್ರಯತ್ನಪಟ್ಟರೂ ಯಮುನಕ್ಕನ ಮಾತು ನಡೆದೇ ಇತ್ತು. ಆಗಲೆಲ್ಲ ನಾನು ಅವರ ನಡುವಿನ ಯಾವುದೋ ಸೂಕ್ಷ್ಮ ಬದಲಾವಣೆಗೆ ಕಾರಣವಾಗುತ್ತಿದ್ದೇನೆ ಅನಿಸುವುದು. ತನ್ನ ಪ್ರೀತಿ ಯಾವಾಗಲೂ ದೊಡ್ಡಪ್ಪನ ಕಡೆಗೇ ಜಾಸ್ತಿ. ಯಮುನಕ್ಕನನ್ನು ಕಂಡರೆ ಯಾಕೋ ಭಯ.

ಜಗಳವಾದ ನಂತರ ಎರಡು ಮೂರು ದಿನ ದೊಡ್ಡಪ್ಪ ಹೆಚ್ಚು ಮಾತಾಡದೇ ಮೌನವಾಗಿರುತ್ತಿದ್ದರು. ಪ್ರತೀ ಜಗಳವಾದಾಗಲೂ ಯಮುನಕ್ಕ 'ನೀರಿಲ್ಲದವರು...' ಎಂದೇನೋ ಹೇಳಿ ಅವರ ಬಾಯಿ ಮುಚ್ಚಿಸುತ್ತಿದ್ದರು. ಆ ಮಾತಿಗೆ ದೊಡ್ಡಪ್ಪ ಕುಸಿದು ಹೋಗುವ ರೀತಿಯೇ ತನಗೆ ವಿಸ್ಮಯ ಹುಟ್ಟಿಸುತ್ತಿತ್ತು. ಈಗ ಒಂದಕ್ಕೊಂದು ತಾಳಮೇಳ ಹಚ್ಚಿ ನೋಡಿದರೆ ಅರ್ಥಗಳು ಹೊಳೆಯುತ್ತವೆ. ಜೊತೆಗೆ ಅನೇಕ ಸಂದೇಹಗಳು. ಗಂಡಸುತನವಿಲ್ಲದ ಕಾರಣಕ್ಕೆ ಅಪ್ಪನನ್ನು ಬಿಟ್ಟು ಅಮ್ಮ ಶೀನನ ಜೊತೆ ಓಡಿಹೋದಳಿರಬೇಕು. ಅದೇ ಕಾರಣಕ್ಕೆ ಯಮುನಕ್ಕ ದೊಡ್ಡಪ್ಪನನ್ನು ಮೆಟ್ಟಿ ಆಳುತ್ತಿದ್ದಳು. ಯಾಕೆ ಈ ಎಲ್ಲ ಪ್ರಶ್ನೆಗಳು ಜೀವ ಹಿಂಡುವ ನೋವುಗಳಾಗಿ ತನ್ನನ್ನು ಕಾಡಲಾರವು? ಅವು ಒಳಗಿನಿಂದ ಎದ್ದು ಬಾರದ ಹಾಗೆ ತಕ್ಕ ಬಂದೋಬಸ್ತು ಮಾಡಿದ್ದೇನೆಯೇ? ಫ್ಯಾಕ್ಟರಿ, ಬೋನಸ್ಸು, ಓಟಿ, ಉಣ್ಣುವುದು, ಮಲಗುವುದು. ಇದರಾಚೆ ಜೀವನದ ಗಾಡಿ ಬಾರದ ಹಾಗೆ ಎಚ್ಚರ ವಹಿಸಿದ್ದೇನೆ. ಈ ಹಳಿ ತಪ್ಪಿದರೆ ಗಾಡಿ ಸೀದಾ ದೊಡ್ಡಪ್ಪ, ಯಮುನಕ್ಕ, ದೀವಿಗೆಯಂತಹ ಗೂಢ ಪ್ರಪಾತಕ್ಕೆ ಧುಮುಕುತ್ತದೆನ್ನುವುದು ಖಾತ್ರಿ ಗೊತ್ತು. ಮೊನ್ನೆ ಮೊನ್ನೆ ಪುರುಷೋತ್ತಮ, ಪತ್ರದಲ್ಲಿ ಶಾಂತ ಕುಮಾರಿಯ ಮದುವೆಯಾಗಿ ಮೂರು